





# ಗಾಂಧಿ–ಗೋಡ್ಸೆ ಸಂವಾದವೂ ಪಠಾಣನ ದೇಶಪ್ರೇಮವೂ

**ಗಣರಾಜ್ಯೋತ್ಸವ ಸಂದರ್ಭದಲ್ಲಿ ತೆರೆಕಾಣುತ್ತಿರುವ ಎರಡು ಸಿನಿಮಾಗಳು ಟ್ರೇಲರ್‌ಗಳ ಮೂಲಕವೇ ತಮ್ಮ ಹೂರಣ ಬಿಟ್ಟುಕೊಟ್ಟಿವೆ. ಎರಡೂ ಸಿನಿಮಾಗಳಿಗೆ ದೇಶಭಕ್ತಿಯೇ ಬಂಡವಾಳ.**

**ವಿಶಾಖ ಎನ್.**

ಮಾರುಕಟ್ಟೆ ಸಿನಿಮಾ ತಯಾರಕರನ್ನು ಹೇಗೆಲ್ಲ ಪ್ರೇರೇಪಿಸುತ್ತದೆ ಎನ್ನುವುದಕ್ಕೆ ಗಣರಾಜ್ಯೋತ್ಸವದ ಸಂದರ್ಭದಲ್ಲಿ ತೆರೆಕಾಣುತ್ತಿರುವ ಎರಡು ಹಿಂದಿ ಸಿನಿಮಾಗಳು ಉತ್ತಮ ಉದಾಹರಣೆಗಳು. ಒಂದು, ಶಾರುಖ್ ಖಾನ್–ದೀಪಿಕಾ ಜೋಡಿಯ 'ಪಠಾಣ್'. ಇನ್ನೊಂದು, ರಾಜ್‌ಕುಮಾರ್ ಸಂತೋಷಿ ನಿರ್ದೇಶಿಸಿರುವ 'ಗಾಂಧಿ–ಗೋಡ್ಸೆ ಏಕ್ ಯುದ್ಧ್'.

ಮೊದಲಿಗೆ 'ಗಾಂಧಿ–ಗೋಡ್ಸೆ ಏಕ್ ಯುದ್ಧ್' ಸಿನಿಮಾವನ್ನು ಒಂದು ಮಾರುಕಟ್ಟೆ ತಂತ್ರದ ಸಿನಿಮಾ ಯಾಕೆ ಎಂದು ನೋಡೋಣ. ಈ ಸಿನಿಮಾದಲ್ಲಿ ನಿರ್ದೇಶಕರು ಗಾಂಧಿಯನ್ನು ಗೋಡ್ಸೆ ಗುಂಡಿನ ದಾಳಿಯಿಂದ ಸಾಯಲು ಬಿಡುವುದಿಲ್ಲ. ಹತ್ಯಾಯತ್ನದ ಫಲವಾಗಿ ಗೋಡ್ಸೆ ಜೈಲುವಾಸಿಯಾಗುತ್ತಾನೆ. ಅವನ ಹಾಗೂ ಗಾಂಧಿ ನಡುವಿನ ಸಂವಾದವನ್ನು ನಿರ್ದೇಶಕರು ಮುಂದುವರಿಸುತ್ತಾರೆ. ಸೃಜನಶೀಲ ಅನುಕೂಲವನ್ನು ನಿರ್ದೇಶಕರು ವರ್ತಮಾನದ ರಾಜಕೀಯ ವಾಸನೆಯನ್ನು ಅರಿತೇ ಇಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಜವಾಹರಲಾಲ್ ನೆಹರೂ, ಅಂಬೇಡ್ಕರ್ ಎಲ್ಲ ಪಾತ್ರಧಾರಿಗಳ ವಿಚಾರಧಾರೆಯನ್ನು ಹಿಂದೂ–ಮುಸ್ಲಿಂ ತಿಕ್ಕಾಟಕ್ಕೇ ಸೀಮಿತಗೊಳಿಸಿದ ಸಂವಾದಕ್ಕೆ ಚೌಕಟ್ಟು ಹಾಕುತ್ತಾರೆ. ಟ್ರೇಲರ್‌ನಲ್ಲೇ ಇಷ್ಟೂ ಅನಾವರಣಗೊಂಡಿದೆ.

'ಕಾಶ್ಮೀರ್ ಫೈಲ್ಸ್' ಸಿನಿಮಾ ಒಂದು ರೀತಿಯಲ್ಲಿ ಹೀಗೆಯೇ ಸೃಜನಶೀಲ ಸ್ವಾತಂತ್ರ್ಯ ಬಳಸಿಕೊಂಡು 'ಬಗೆದು'ನೋಡಿ, ಹಣ ಬಾಚಿತ್ತು. ಆ ಸಿನಿಮಾದಲ್ಲಿ ಅಭಿನಯಿಸಿದ್ದ ಚಿನ್ಮಯ್ ಮಾಡ್ಲೇಕರ್ ಈ ಸಿನಿಮಾದಲ್ಲಿ ಗೋಡ್ಸೆ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಇನ್ನು ಗಾಂಧಿ ಪಾತ್ರದಲ್ಲಿ ನಟಿಸಿರುವವರು ದೀಪಕ್ ಆ್ಯಂಟನಿ. ಅವರು ಗುಜರಾತ್‌ನ ಕಿರುಚಿತ್ರ ನಿರ್ಮಾಣದ ಪ್ಯಾನಲ್‌ನಲ್ಲಿ ಇದ್ದವರು. ಮೇಲಾಗಿ ಕಂಠದಾನ ಕಲಾವಿದ. ಅವರೂ ಬರೋಡಾದವರೇ.

'ಘಾಯಲ್' ಹಿಂದಿ ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗೆದ್ದ ರಾಜ್‌ಕುಮಾರ್ ಸಂತೋಷಿ, ವೈವಿಧ್ಯಮಯ ಚಲನಚಿತ್ರಗಳನ್ನು ಕೊಟ್ಟವರು. 'ದಾಮಿನಿ', 'ಅಂದಾಜ್ ಅಪ್ನಾ ಅಪ್ನಾ', 'ಘಾತಕ್', 'ಪುಕಾರ್', 'ದಿ ಲೆಜೆಂಡ್ ಆಫ್ ಭಗತ್ ಸಿಂಗ್', 'ಖಾಕಿ', 'ಫಟಾ ಪೋಸ್ಟರ್ ನಿಕ್ಲಾ ಹೀರೊ' – ಇವೆಲ್ಲ ಅವರ ನಿರ್ದೇಶನದ ಹಲವು ಕಥಾವಸ್ತುಗಳ ನಮೂನೆಗಳು. 'ಫಟಾ ಪೋಸ್ಟರ್...' ತೆರೆಕಂಡ ಹತ್ತು ವರ್ಷಗಳ ನಂತರ ಅವರು ಚರ್ಚೆಗೆ ಒಳಗಾಗಬಲ್ಲ ಗಾಂಧಿ–ಗೋಡ್ಸೆ ಮುಖಾಮುಖಿಯನ್ನು ತೆರೆಗೆ ತಂದಿದ್ದಾರೆ. ರಾಜ್‌ಕುಮಾರ್ ಸಂತೋಷಿ ನಿಲುವೇನು ಎಂಬ ಪ್ರಶ್ನೆ ಇಟ್ಟುಕೊಂಡೇ ಸಿನಿಮಾ ನೋಡಬೇಕು.

'ಪಠಾಣ್' ಸದ್ಯಕ್ಕೆ 'ಬೇಷರಮ್' ಹಾಡಿನ ವಿವಾದದಿಂದಲೇ ಸದ್ದು ಮಾಡಿದೆ. ಆದರೆ, ಆ ಸಿನಿಮಾ ಟ್ರೇಲರ್‌ನಲ್ಲೂ ದೇಶ ಉಳಿಸುವ ಕಥಾಸಾರಾಂಶವೇ ಇದೆ. ಜಾನ್ ಅಬ್ರಹಾಂ ದೇಶವನ್ನೇ ಚಿಂದಿಮಾಡಲು ಹೊರಟ ಖಳ. ಅಜ್ಞಾತವಾಸ ಮುಗಿಸಿದ ಶಾರುಖ್, ಪಠಾಣ್ ರೂಪದಲ್ಲಿ ಕಣಕ್ಕಿಳಿಯುತ್ತಾನೆ. ಅವನ ಬಂದೂಕಿನ ನಳಿಕೆ ಮಾತನಾಡಿದರೆ, ದೀಪಿಕಾ ಕಸರತ್ತಿನ ವರಸೆಗಳು ರೋಮಾಂಚನಗೊಳಿಸುತ್ತವೆ. ಕೊನೆಗೆ ದೇಶ ಉಳಿಸಿ, 'ಜೈ ಹಿಂದ್' ಎಂದು ಪಠಾಣ್ ಸಲಾಂ ಹೊಡೆಯುತ್ತಾನೆ. ಇವು ಟ್ರೇಲರ್ ತೋರುವ ಅಂಶಗಳು.

ದೇಶಭಕ್ತಿಯ ರಸವನ್ನು ಬೇರೆ ಬೇರೆ ರೂಪದಲ್ಲಿ ಹರಿಸಿದರೆ, ಭಾರತದ ಬಹುಸಂಖ್ಯಾತ ಪ್ರೇಕ್ಷಕರು ತಿರುಗಿ ನೋಡುವಂತೆ ಮಾಡಬಹುದೆಂಬ ಲೆಕ್ಕಾಚಾರ ನಿರ್ದೇಶಕ ಸಿದ್ಧಾರ್ಥ್ ಆನಂದ್ ಅವರದ್ದು. ಇದಕ್ಕೆ ಅವರು ಸಾಹಸದ ದೃಶ್ಯಗಳನ್ನು ನೆಚ್ಚಿಕೊಂಡಿದ್ದಾರೆ. 'ಬ್ಯಾಂಗ್ ಬ್ಯಾಂಗ್' ಹಾಗೂ 'ವಾರ್' ಸಿನಿಮಾಗಳನ್ನು ಮಕ್ಕಳು, ಪಡ್ಡೆಗಳು ಖುಷಿಯಿಂದ ನೋಡಿದ ಯಶಸ್ವಿ ಮಾದರಿಗಳು ಅವರ ಬೆನ್ನಿಗಿವೆ.

ಜನವರಿ 25ಕ್ಕೆ 'ಪಠಾಣ್' ಸಾಹಸ, 26ಕ್ಕೆ ಗಾಂಧಿ–ಗೋಡ್ಸೆ ಸಂವಾದ. ಪ್ರೇಕ್ಷಕರಿಗೆ ಗಣರಾಜ್ಯೋತ್ಸವದ ಶುಭಾಶಯ.